ಸಿನೆಮಾ, ಪೇಟೆ ಸುತ್ತುವುದು, ನನ್ನ ನೂರಾರು ಆಸೆಗಳು, ಹತ್ತಾರು ಬಯಕೆಗಳು ಯಾವುದಕ್ಕೂ ಸ್ಪಂದನೆ ಇಲ್ಲ. ಎಂದೂ ನಚ್ಚನೆಯ ಮಾತುಗಳನ್ನು ಕೇಳದ ಅವಳಿಗೆ ಬರೀ ರಾತ್ರಿ ಸುಖಕ್ಕಾಗಿ ಹಾಸಿಗೆಯಲ್ಲಿ ಹೊರಳಾಡಿ ಬೆಳಗ್ಗೆ ಎದ್ದು ಜಮೀನು ಕೆಲಸ, ಮನೆಯಲ್ಲಿ ಊಟ ಇಷ್ಟರ ಹೊರತು ಏನೂ ಗೊತ್ತಿಲ್ಲದ ಗಂಡು ಎನ್ನುವ ಕೊರಡಿನೊಂದಿಗೆ ಹದಿಮೂರು ವರ್ಷ ಜೀವನ ಸವೆಸಿ ಸವೆಸಿ ಯಂತ್ರದಂತೆ ಬದುಕಬೇಕಾಯಿತು. ಆದರೆ, ಜನರ ಕಣ್ಣಿಗೆ ನೋಡುವುದಕ್ಕೆ ಮಾತ್ರ ಗಂಡ-ಹೆಂಡತಿಯಾಗಿದ್ದು ನಿಸ್ಸಾರ ಜೀವನ ಮಾಡಿದಂತಾಯಿತು' ಎಂದು ಅನ್ನಪೂರ್ಣ ಆಲೋಚಿಸುತ್ತಾ, ನಾನು ಶ್ರೀಕಂಠನೊಂದಿಗೆ ಹೊರಡುವುದೇ ಸರಿಯಾದುದೆಂದು ಮನಸ್ಸಿನೊಳಗೆ ನಿರ್ಧಾರಕ್ಕೆ ಬಂದಿದ್ದಳು. ಮಕ್ಕಳನ್ನು ನೆನದು, 'ಅವರ ಅಜ್ಜಿಯ ಜೊತೆ ಬದುಕುತ್ತವೆ, ನನ್ನ ಗಂಡ ಕರಿವೀರನೇ ಜವಾಬ್ದಾರಿ ವಹಿಸಿಕೊಂಡು ನೋಡಿಕೊಳ್ಳಲಿ ಬಿಡು ನನಗೇನು? ನಾನು ಇದರಿಂದ ಬಿಡಿಸಿಕೊಂಡು ಹೊರಡಬೇಕು ಅಷ್ಟೆ! ನನ್ನ ಸುಖ ನನ್ನದು, ಈ ಕಾಲದಲ್ಲಿ ಬದುಕುವುದಕ್ಕೆ ನೂರು ದಾರಿಗಳು ಸಿಟಿಯಲ್ಲಿ ಇರುತ್ತವೆ. ನಗರದಲ್ಲಿ ನಾವಿಬ್ಬರೂ ಕೆಲಸಕ್ಕೆ ಹೋದರೆ ಇದಕ್ಕಿಂತ ಒಳ್ಳೆಯ ಸುಂದರ ಜೀವನ ಕಟ್ಟಿಕೊಳ್ಳಬಹುದು, ಈ ಹಳ್ಳಿಯಲ್ಲಿಯೇ ಇದ್ದು, ಬಯಕೆಗಳನ್ನೆಲ್ಲಾ ಅದಮಿಟ್ಟುಕೊಂಡು ಸಾಯುವುದಕ್ಕಿಂತ, ನನ್ನಿಷ್ಟದಂತೆ ನಾನು ಸಿಟಿಯಲ್ಲಿ ಅಡ್ಡಾಡುತ್ತಾ ಸುಖ ಜೀವನ ನಡೆಸಬಹುದು' ಎಂದು ಮನಸ್ಸಿನಲ್ಲಿಯೇ ಒಂದು ಗಟ್ಟಿ ನಿರ್ಧಾರ ಮಾಡಿಕೊಂಡಳು.

ಶ್ರೀಕಂಠ ಮತ್ತು ಅನ್ನಪೂರ್ಣರ ಸ್ನೇಹ, ವೈವಾಹಿಕ ಸಂಬಂಧದವರೆಗೂ ಬೆಳೆದು ಎರಡು ಮಕ್ಕಳಿರುವ ತಾಯಿಯಾದ ಅನ್ನಪೂರ್ಣಳೊಡನೆ ಸಂಬಂಧ ಬೆಳೆಸಲು ಶ್ರೀಕಂಠ ಒಪ್ಪಿದ. ಮನಸ್ಸಿನಲ್ಲಿ ಗಟ್ಟಿ ನಿರ್ಧಾರಕ್ಕೆ ಬಂದು, ಯಾವುದಾದರೂ ದೂರದ ಊರಿನಲ್ಲಿ ಇಬ್ಬರೂ ಜೊತೆಯಾಗಿ ಬದುಕುವುದಕ್ಕೆ ಅನ್ನಪೂರ್ಣಳೊಡನೆ ಚರ್ಚಿಸಿ ತೀರ್ಮಾನಿಸಿಕೊಂಡಿದ್ದರು. ಕರುವಿನಕಟ್ಟೆ ಬಿಟ್ಟು ಹೊರಡಲು ಮಾನಸಿಕ ಸಿದ್ಧತೆಗಳನ್ನು ಇಬ್ಬರೂ ಕಳೆದೆರೆಡು ತಿಂಗಳಿಂದ ನಡೆಸಿದ್ದರು. ಅನ್ನಪೂರ್ಣ, ತಾನು ಕೂಡಿಟ್ಟ ಸ್ವಲ್ಪ ದುಡ್ಡು ಮತ್ತು ಕಿವಿಯೋಲೆ, ಸರ, ಉಂಗುರ, ಬಂಗಾರದೊಡವೆಗಳು ಒಂದಿಷ್ಟು ಬಟ್ಟೆಬರೆಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಶ್ರಾವಣ ಮಾಸದಲ್ಲಿ ನಾಗರಪಂಚಮಿಗೆ ಹಾಲೆರೆವ ದಿನದ ರಾತ್ರಿ ಮನೆ ಬಿಟ್ಟು ಹೊರಟಿದ್ದರು.

ಮೈಸೂರಿಗೆ ಬಂದ ಸುರೇಶ ಮತ್ತು ಜೊತೆಗಾರ ಎರಡು ದಿನ ಬೀಡು ಬಿಟ್ಟು ಸುತ್ತಾಡಿದರೂ ಎಲ್ಲಿಯೂ ಅನ್ನಪೂರ್ಣ ಮತ್ತು ಶ್ರೀಕಂಠರ ಸುಳಿವು ದೊರೆಯದೇ ಹೋಯಿತು. ಕೊನೆಗೆ ತಮ್ಮೂರಿನ ವೀರೇಂದ್ರ ಕೆಲಸ ಮಾಡುತ್ತಿದ್ದ ಆಸ್ಪತ್ರೆಯನ್ನು ಪತ್ತೆ ಮಾಡಿ ಆತನನ್ನೂ ಜೊತೆ ಮಾಡಿಕೊಂಡು ಹುಡುಕಲು ಆರಂಭಿಸಿದರು. ಮೈಸೂರೆಲ್ಲಾ ಸುತ್ತಿ ಸಿಗದಿದ್ದಾಗ ಒಂದು ದಿನ ಶ್ರೀರಂಗಪಟ್ಟಣದ ರಂಗನಾಥ ದೇವಸ್ಥಾನದ ಕಡೆ ಹೋಗಿರಬಹುದೆಂದು ಭಾವಿಸಿ, ಅಲ್ಲಿಗೂ ಹೋಗಿ ಸುತ್ತಾಡುತ್ತಾ ಸಂಜೆ ಕಳೆದರು. ಹೀಗೆ ಶ್ರೀರಂಗಪಟ್ಟಣ ಮತ್ತು ಮೈಸೂರಿನಲ್ಲಿ ಗೊತ್ತುಗುರಿಯಿಲ್ಲದಂತೆ ಅಲೆದಲೆದು ಸುಸ್ತಾಗಿದ್ದರು. ಮೈಸೂರೆಂಬ ದೊಡ್ಡ ನಗರದಲ್ಲಿ ವಿಳಾಸವಿಲ್ಲದವರನ್ನು ಹೇಗೆ ಹುಡುಕುವುದು?

ಮೈಸೂರಿಗೆ ಅನ್ನಪೂರ್ಣಳನ್ನು ಕರೆತರಲು ಹೋಗಿದ್ದ ಸುರೇಶ ಆತನ ಜೊತೆಗಾರನಿಗೆ ಅನ್ನಪೂರ್ಣ ಮತ್ತು ಶ್ರೀಕಂಠನ ಜೋಡಿ ಪತ್ತೆಯಾಗದೇ ಬರಿಗೈಲಿ ಊರಿಗೆ ಹಿಂದಿರುಗಿದ್ದರು. ಆದಾದ ವಾರೊಪ್ಪೊತ್ತಿನಲ್ಲಿ ಅನ್ನಪೂರ್ಣ ಮತ್ತು ಶ್ರೀಕಂಠ ತಮ್ಮ ಈ ಸಂಬಂಧವನ್ನು ಕಾನೂನಿನ ರೀತ್ಯಾ ಗಟ್ಟಿ ಮಾಡಿಕೊಳ್ಳಲು ಲಾಯರ್‌ರೊಂದಿಗೆ ಕರುವಿನಕಟ್ಟೆ ಸಮೀಪದ ಕಡಬನೂರು ಪೊಲೀಸ್ ಠಾಣೆಗೆ ಬಂದರು. ಪೊಲೀಸರ ಸಮ್ಮುಖದಲ್ಲಿಯೇ ಇಬ್ಬರು ಮದುವೆಯಾಗಿ ಜೀವನ ನಡೆಸುವುದಾಗಿಯೂ, ನಮ್ಮಿಬ್ಬರಿಗೆ ಯಾರೂ ತೊಂದರೆ ಕೊಡಬಾರದು, ತಮ್ಮ ತಂಟೆಗೆ ಯಾರೂ ಬರಬಾರದು ಎಂದು ಇದೆಲ್ಲವನ್ನು ಪೊಲೀಸ್ ಸ್ಟೇಷನ್‌ನಲ್ಲಿಯೇ ತೀರ್ಮಾನ ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಬಂದಿದ್ದರು. ಪೊಲೀಸ್‌ರ ಮೂಲಕವೇ ಕರುವಿನಕಟ್ಟೆಯ ಎರಡೂ ಮನೆಯವರಿಗೆ ಸ್ಟೇಷನ್‌ಗೆ ಬರುವಂತೆ ಸುದ್ದಿಯನ್ನು ಮುಟ್ಟಿಸಿದರು.

ಪೊಲೀಸರ ಮೂಲಕ ವಿಷಯ ತಿಳಿದ ಹನುಮಕ್ಕ, ತಂಗಿ ಸುಭದ್ರಮ್ಮ, ಅನ್ನಪೂರ್ಣಳ ಎರಡು